ಒಪ್ಪಿಬಿಡುತ್ತಾಳಾ?

ತಾನೆಂಬ ಅಲೆಮಾರಿ ದೋಣಿಯೀಗ ಮಂಗಳಾ ಎನ್ನುವ ಸುಂದರ ತೀರವನ್ನು ತಲುಪಿ ನಿಂತಿದೆಯಾ?

ನವಿರಾದ ಅಯೋಮಯದ ಹೊದಿಕೆಯಡಿಯಲ್ಲಿ ಮೆಲ್ಲನೆ ಯೋಚಿಸತೊಡಗಿದ. ಬೇಡ. ಈಗಲೇ ಕೇಳುವುದು ಬೇಡ. ಮೊದಲು ಆರ್ಥಿಕವಾಗಿ ಸ್ವಲ್ಪ ಬಲಾಢ್ಯನಾಗಬೇಕು. ತನ್ನ ಮಗಳ ಆಯ್ಕೆಯನ್ನು ಪರೀಕ್ಷಿಸಲೆಂದು ಅವಳ ಮನೆಯವರು ಬಂದಾಗ ತಾನು ತೀರಾ ಅರಮನೆ ಅಲ್ಲದಿದ್ದರೂ ಚೊಕ್ಕದಾದ ಟೆರಸ್ಸಿನ ಮನೆಯಲ್ಲಾದರೂ ನಿಂತು ಅವರನ್ನು ಸ್ವಾಗತಿಸಬೇಕು. ಬದುಕಿನಲ್ಲಿ ಮೊಟ್ಟಮೊದಲಬಾರಿಗೆ ತನ್ನನ್ನು ಆಯ್ಕೆಮಾಡಿಕೊಂಡಿರುವವಳ ಆಯ್ಕೆಯನ್ನು ತಾನು ಸಮರ್ಥಿಸಲೇಬೇಕು!

ಅಂದಿನ ಅವನ ನಿದಿರೆ ಎಂದಿನಂತಿರಲಿಲ್ಲ.

★★★

ಕನಸು ನನಸಾಗುತ್ತಿದೆ!

ಇನ್ನೇನು ಮಂಗಳಾ ಬಂದು ಕೂರಬೇಕಿರುವ ಕ್ಯಾಬಿನ್‌ನ ಕುರ್ಚಿಯನ್ನೇ ನೋಡುತ್ತಾ ತನ್ನೊಳಗೇ ಹಾಗೆಂದುಕೊಂಡ ರಾಜೀವ್. ಜೊತೆಯಲ್ಲಿ ಓದಿ ಬೆಳೆದ ಗೆಳೆಯರೆಲ್ಲರ ಮದುವೆ ದಿಬ್ಬಣಗಳು ಮನೆಯ ಮುಂದೆಯೇ ಸಾಗುತ್ತಿವೆ. ಅವರ 'ವೆಲ್ ಸೆಟಲ್ಡ್' ಬದುಕಿನ ಹೆಮ್ಮೆಯ ಪ್ರತೀಕಗಳಾದ ಕಾರು, ಬೈಕುಗಳ ಉನ್ಮಾದದ ಹಾರನ್ನೀಗ ತನ್ನ ಅಸ್ಥಿರ ಬದುಕನ್ನು ಕೆಣಕುತ್ತಿದೆ. ತನ್ನ ತೇರೂ ಹೊರಡಬೇಕಿದೆ. ಕಾರಿನಲ್ಲಿ ಅಲ್ಲದಿದ್ದರೂ ಕಾಲ್ನಡಿಗೆಯಲ್ಲಾದರೂ ನಡೆದು ಸಾಗಬೇಕಿದೆ. ಖುಷಿಯ ಸಂಗತಿಯೆಂದರೆ ಜೊತೆನಡೆಯಲಿಕ್ಕೆ ತನಗೀಗ ವಿನೂತನ ಜೊತೆಯೊಂದು ದೊರಕಿದೆ...

ಮಂಗಳಾ!

ಅಭಿಪ್ರಾಯಗಳಲ್ಲಿ ಸಾಮ್ಯತೆಯಿದೆ. ಆಕಾಂಕ್ಷೆಗಳು ಒಂದೇ ಆಗಿವೆ. ಲೆಕ್ಕಾಚಾರಗಳು ಮ್ಯಾಚ್ ಆಗುತ್ತಿವೆ. ಅವಳು ಹುಡುಕುತ್ತಿರುವ ವಿಗ್ರಹದ್ದೂ ತಾನು ಕೆತ್ತುತ್ತಿರುವ ಕಲ್ಲಿನದ್ದೂ ಅಂತಿಮ ರೂಪ ಒಂದೇ ಆಗಿದೆ. ಎಲ್ಲದಕ್ಕಿಂತ ಹೆಚ್ಚಾಗಿ ತನ್ನೆದೆಯಲ್ಲಿ ಪ್ರಜ್ವಲಿಸುತ್ತಿರುವ ಪ್ರೇಮ ಜ್ಯೋತಿಯೇ ಅವಳ ಹೃದಯದಲ್ಲೂ ಉರಿಯುತ್ತಿದೆ. ತನ್ನಂತೆಯೇ ಮಧ್ಯಮ ವರ್ಗದವಳು. ಊರು, ನೆಮ್ಮದಿ, ಜಮೀನು ಎಂದು ತನ್ನಹಾಗೇ ಚಿಕ್ಕಚಿಕ್ಕ ಆಸೆಗಳ ಕೈತೋಟ ಬೆಳೆಸಿಕೊಂಡಿರುವವಳು. ಇಬ್ಬರೂ ಸಂಗಾತಿಗಳಾಗಿ ಕೈಜೋಡಿಸಿದರೆ ಆ ಕೈತೋಟ ಉದ್ಯಾನವನವಾಗಲಿಕ್ಕೆ ಎಷ್ಟು ಹೊತ್ತು? ಇಬ್ಬರ ಸಂಬಳದಲ್ಲಿ ಒಬ್ಬರದ್ದನ್ನು ತಿಂಗಳ ಖರ್ಚಿಗೆ ಬಳಸಿ ಇನ್ನೊಬ್ಬರದ್ದನ್ನು ಉಳಿಸಿದರೂ ಮುಂದಿನ ಎರಡು ವರ್ಷದಲ್ಲಿ ಒಂದೊಳ್ಳೆ ಜಮೀನು ಕೊಳ್ಳಬಹುದು. ಇಲ್ಲಿ ದುಡಿದು ಲೋನ್ ತೀರಿಸುತ್ತಾ ಅಲ್ಲಿ ಕೃಷಿಯನ್ನೂ ನಿಭಾಯಿಸಿದರೆ ಮತ್ತೆರಡು ವರ್ಷಗಳಲ್ಲಿ ತೋಟವೂ ಫಲಕೊಡಲಾರಂಭಿಸುತ್ತದೆ. ಆ ಪ್ರತಿಫಲ ತಮ್ಮ ನೆಮ್ಮದಿಯ ಬದುಕಿಗೆ ಸಾಕಾಗುವ ಮಟ್ಟವನ್ನು ತಲುಪಿದ ದಿನ ತಾನು ಹಾಗೂ ಮಂಗಳಾ ಈ ಒತ್ತಡ, ಯಾಂತ್ರಿಕತೆಗಳ ಮಹಾನಗರಿಯನ್ನೊಮ್ಮೆ ಕೊನೆಯ ಬಾರಿಗೆ ನೋಡಿ ಊರಿನ ಬಸ್ಸು ಹತ್ತುತ್ತೇವೆ!

ಕನಸಿನ ಗೂಡನ್ನು ಜೊತೆಯಾಗಿ ಹೆಣೆಯುವುದರಲ್ಲಿ ಎಷ್ಟೊಂದು ಸಂಭ್ರಮವಿದೆಯಲ್ಲಾ?

ಅವಳಿನ್ನೂ ಬಂದು ಕೂರದ ಖಾಲಿ ಕುರ್ಚಿಯ ಸುತ್ತಾ ಕನಸುಗಳ ಬಳ್ಳಿ ಹಬ್ಬಿಸುತ್ತಿದ್ದ ರಾಜೀವ ಥಟ್ಟನೆ ವಾಚು ನೋಡಿಕೊಂಡ. ಸಮಯ ಹತ್ತೂ ಮೂವತ್ತು ದಾಟಿದೆ. ಅವಳೇಕಿನ್ನೂ ಆಫೀಸಿಗೆ ಬಂದಿಲ್ಲ? ಹುಷಾರು ಗಿಷಾರು ತಪ್ಪಿರಬಹುದೇ? ಕೇಳೋಣವೆಂದು ಫೋನಾಯಿಸಿದ. ಆಚೆ ಕಡೆ ಸಂಪೂರ್ಣ ರಿಂಗಾದರೂ ಅವಳಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ. ಸಣ್ಣ ಚಿಂತೆಯ ಕಿಟಕಿಯೊಂದನ್ನು ತೆರೆದಿಟ್ಟುಕೊಂಡೇ ಕೆಲಸ ಮುಂದುವರೆಸಿದ.